ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಹಿಂದೆ ಅವರಲ್ಲೂ ಆಗಿದೆ. ಆದ್ದರಿಂದ ನಾನು ಬಹಳ ಗಂಭೀರವಾಗಿ ಆರು ತಿಂಗಳಿಂದ ಗೃಹ ಖಾತೆಯ ಮಂತ್ರಿಯವರಲ್ಲಿ ಕೇಳಿದ್ದೇನೆ. ಮತ್ತು ಡಿಜಿಪಿ ಯವರಲ್ಲೂ ಕೇಳಿದ್ದೇನೆ. ಇಡೀ ಪೋಲೀಸ್ ಸಿಬ್ಬಂದಿ ಅಲ್ಲಿರುವವರನ್ನು ಬದಲಾವಣೆ ಮಾಡಬೇಕು ಎಂದು ಹೇಳಿದರೂ ಇದುವರೆಗೂ ನಾನು ಲಿಖಿತ ಮೂಲಕವಾಗಿ ಕೊಟ್ಟರೂ ಸಹಿತ ಕ್ರಮ ತೆಗೆದುಕೊಂಡಿಲ್ಲ.

ಅಧ್ಯಕ್ಷರು:- ಆಯಿತು, ಬಹಳ ಹೊತ್ತು ಹೇಳುವ ಹಾಗೆ ಇಲ್ಲ. ಸೀನಿಯರ್ ಮೆಂಬರ್ ಫ್ರಂಟ್ ಬೆಂಚ್‌ಗೆ ಬಂದಿದ್ದೀರಿ. ಫ್ರಂಟ್ ಬೆಂಚ್‌ನಲ್ಲಿರುವವರು ಹಿಂದೆ ಇರುವವರಿಗೆ ಮಾರ್ಗದರ್ಶಕರು. ನೋಡಿ, ಸುರೇಶ್‌ಕುಮಾರ್ ಎಷ್ಟೊಂದು ಚೆನ್ನಾಗಿ ಮಾತನಾಡಿದರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ನಾನು ಹೇಳುತ್ತಿರುವುದು ನಿರಂತರವಾಗಿ ನಡೆಯುತ್ತಿದ್ದರೂ ಪೋಲೀಸ್ ಇಲಾಖೆ ಏನೂ ಕ್ರಮ ತೆಗೆದುಕೊಂಡಿಲ್ಲ. ಸರ್ಕಾರ ಇದರ ಬಗ್ಗೆ ಏನು ತಕ್ಷಣ ಕ್ರಮ ತೆಗೆದುಕೊಳ್ಳುತ್ತೆ ಎಂದು ಹೇಳಬೇಕು. ಮತ್ತು ಇಡೀ ಪೋಲೀಸ್ ಸಿಬ್ಬಂದಿಯನ್ನು ಬದಲಾವಣೆ ಮಾಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಆರ್. ರೋಷನ್ ಬೇಗ್ (ರಾಜ್ಯ ಗೃಹ ಸಚಿವರು):- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀರಾಮ ರೆಡ್ಡಿಯವರು ನನಗೆ ಮೊದಲೇ ಹೇಳಿದರು, ಅಲ್ಲಿ ಪೋಲೀಸ್ ಸಿಬ್ಬಂದಿಗಳನ್ನು ಬದಲಾವಣೆ ಮಾಡಬೇಕು, ಕಾನ್ಸ್‌ಟೇಬಲ್, ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್, ಹೆಡ್ ಕಾನ್ಸ್‌ಟೇಬಲ್ ಅವರಿಗೆಲ್ಲಾ ವರ್ಗ ಮಾಡಬೇಕು ಎಂದು ಹೇಳಿದರು. ಅದೇನಾಯಿತು ಎಂದರೆ ಅವರಿಗೆಲ್ಲಾ ಈಗ ಮಿಡ್ಲ್ ಆಫ್ ದಿ ಅಕಾಡೆಮಿಕ್ ಇಯರ್ ಮಾಡುವುದು ಬೇಡ, ಜನರಲ್ ಟ್ರಾನ್ಸ್‌ಫರ್‌ನಲ್ಲಿ ಅವರಿಗೆಲ್ಲಾ ವರ್ಗ ಮಾಡಬೇಕು ಎಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಅದೇ ರೀತಿ ಮಾಡುತ್ತೇವೆ ಎಂದು ನಾನು ಮಾನ್ಯ ಸದಸ್ಯರಿಗೆ ಆಶ್ವಾಸನೆ ಕೊಡುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಆರೋಗ್ಯ ಮಂತ್ರಿಗಳವರ ಗಮನಕ್ಕೆ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿರುವ ವಿಷಯವನ್ನು ತರುತ್ತಿದ್ದೇನೆ.

ಅಧ್ಯಕ್ಷರು:- ನೀವು ಹೇಳಿ. ಅದನ್ನು ಅವರಿಗೆ ನಾನು ತಿಳಿಸುತ್ತೇನೆ.

ಈ. ಚಿಕ್ಕಮಗಳೂರು ಜಿಲ್ಲೆ ವೈದ್ಯಾಧಿಕಾರಿಗಳ ನೇಮಕ.

+ ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು):- ಮಾನ್ಯ ಅಧ್ಯಕ್ಷರೇ, ನಮ್ಮಲ್ಲಿ ಸಾರ್ವಜನಿಕ ಆಸ್ಪತ್ರೆ ಇದೆ. ಎರಡು ವರ್ಷಗಳಿಂದ ನಾನು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ. ನಮ್ಮಲ್ಲಿ ಜಿಲ್ಲಾ ವೈದ್ಯಾಧಿಕಾರಿಗಳನ್ನು ನೇಮಿಸುವ ಬಗ್ಗೆ ಮಾನ್ಯ ಮಂತ್ರಿಗಳೇ ನನ್ನ ಕ್ಷೇತ್ರಕ್ಕೆ ಬಂದು ವಾಗ್ದಾನ ಮಾಡಿ 15 ದಿವಸದಲ್ಲಿಯೇ ಜಿಲ್ಲಾ ವೈದ್ಯಾಧಿಕಾರಿಗಳನ್ನು ನೇಮಿಸುತ್ತೇನೆ ಎಂದು ಹೇಳಿದ್ದರು ಇಲ್ಲಿಯವರೆಗೂ ನೇಮಿಸಿಲ್ಲ. ಎರಡನೆಯದು ನಮ್ಮ ಸರ್ಕಾರಿ ಆಸ್ಪತ್ರೆಯಲ್ಲಿ ಮಹಿಳಾ ವೈದ್ಯಾಧಿಕಾರಿಗಳು ಕೂಡು ಇಲ್ಲ. ಅವರನ್ನು ಕೂಡ ನೇಮಿಸಿಲ್ಲ. ಇದರ ಬಗ್ಗೆ ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ಮಹಿಳಾ ವೈದ್ಯಾಧಿಕಾರಿಗಳು ಬರುವುದಿಲ್ಲ ಎಂದರೆ ಏನು ಕಾರಣ ಎಂದು ಗೊತ್ತಾಗುತ್ತಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಮಾನ್ಯ ಅಧ್ಯಕ್ಷರೇ, ತಮ್ಮ ಗಮನಕ್ಕೆ ತರುವ ವಿಚಾರವೆಂದರೆ ಎಲ್ಲಾ ಸರ್ಕಾರಿ ಸಾರ್ವಜನಿಕರ ಆಸ್ಪತ್ರೆಗಳಲ್ಲಿ ಸಂದರ್ಶನ ಸಮಿತಿಗಳನ್ನು ರಚನೆ ಮಾಡಿಕೊಟ್ಟಿದ್ದಾರೆ. ಆದರೆ ಅಲ್ಲಿ ಬರುವ ಸಂದರ್ಶನ ಸಮಿತಿಯ ಸದಸ್ಯರಿಗೆ ಯಾವ ರೀತಿಯಾಗಿಯೂ ಗೌರವಧನ ಸಿಗುವುದಿಲ್ಲ. ಆದರೆ ಇಲ್ಲಿ ಜನತಾ ದಳ ಕಾರ್ಯಕರ್ತರನ್ನು ಸದಸ್ಯರನ್ನಾಗಿ ನೇಮಿಸಿದ್ದಾರೆ. ಇದು ಬಹಳ ಪ್ರಮುಖವಾದುದು. ಸಂದರ್ಶಕ ಸಮಿತಿಗೆ ಸದಸ್ಯರನ್ನು ನೇಮಿಸಿ ಆ ಭಾಗದ ಶಾಸಕರನ್ನು ಅಧ್ಯಕ್ಷರನ್ನಾಗಿ ನೇಮಿಸಿದ್ದಾರೆ. ಆದರೆ ಅಲ್ಲಿ ಯಾವ ಸದಸ್ಯರು ಆಸ್ಪತ್ರೆಯ ಒಳ್ಳೆಯ ಕೆಲಸಕ್ಕಾಗಿ ಆಸ್ಪತ್ರೆ ನೋಡಿಕೊಳ್ಳುವುದಕ್ಕಾಗಿ ಬರುವುದಿಲ್ಲ. ಅದಕ್ಕಾಗಿ ಸರ್ಕಾರಕ್ಕೆ ಮುಂಚೆಯೇ ನಾನು ಕಾಗದ ಪತ್ರ ಬರೆದು ಇರುವಂಥ ಸಂಘ ಸಂಸ್ಥೆಯ ಪದಾಧಿಕಾರಿಗಳನ್ನು ಆ ಭಾಗದಲ್ಲಿರುವವರು ಇದ್ದರೆ ಸಾರ್ವಜನಿಕರ ಆಸ್ಪತ್ರೆಯಲ್ಲಿ ಸೇವೆ ಮಾಡುವವರು ಅಂಥವರನ್ನು ಹಾಕುತ್ತಾರೆ ಎಂದು ಹೇಳಿ ನಾನು ಇವರಿಗೆ ಮಾರ್ಗಸೂಚಿಯನ್ನು ಕೊಟ್ಟಿದ್ದೆ. ಆದರೆ ಇಲ್ಲಿಯವರೆಗೂ ಅದನ್ನೂ ಮಾಡಲಿಲ್ಲ. ಆದುದರಿಂದ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ನಾನು ಆಸ್ಪತ್ರೆಯ ಸಂದರ್ಶಕ ಸಮಿತಿಯ ಅಧ್ಯಕ್ಷನಾಗಿ ಉಳಿಯಬೇಕೋ ಅಥವಾ ಇವತ್ತು ವಿಧಾನ ಸಭೆಯಲ್ಲೇ ತಮ್ಮ ಸಮ್ಮುಖದಲ್ಲೇ ನಾನು ರಾಜೀನಾಮೆ ಕೊಡಬೇಕೋ ಎಂದು ಹೇಳಬೇಕು.

ಅಧ್ಯಕ್ಷರು:- ಬೇಡ.

ಶ್ರೀ ಸಿ.ಆರ್.ಸಗೀರ್ ಅಹಮದ್:- ಮಾನ್ಯ ಅಧ್ಯಕ್ಷರೇ, ಏಕೆಂದರೆ ಆ ಆಸ್ಪತ್ರೆಯ ವ್ಯವಸ್ಥೆ ರಾಜೀನಾಮೆ ಎಂದರೆ ಆಸ್ಪತ್ರೆ ಸಂದರ್ಶಕ ಸಮಿತಿಗೆ ನಾನು ರಾಜೀನಾಮೆ ಕೊಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ನನಗೆ ಬಹಳ ಗಾಬರಿಯಾಯಿತು. ಈಗತಾನೆ ಮರು ಚುನಾವಣೆಯಾಗಿದೆ. ಮತ್ತೊಂದು ಚುನಾವಣೆಗೆ ಹೋಗಬೇಡಿ ಎಂದು.

ಶ್ರೀ ಸಿ.ಆರ್. ಸಗೀರ್ ಅಹಮದ್:- ವಾಟಾಳ್ ನಾಗರಾಜ್‌ರವರು ಹೇಳುತ್ತಿರುತ್ತಾರೆ. ಅವರು ಯಾರ ರಾಜೀನಾಮೆ ಬೇಕಾದರೂ ಕೊಡಿಸುತ್ತಾರೆ.

ಅಧ್ಯಕ್ಷರು:- ನಿಮ್ಮ ರಾಜೀನಾಮೆ ಎಂದರೆ ಯಾರಾದರೂ ಗಾಬರಿಪಡಬಹುದು. ನಾನು ಪಡುವುದಿಲ್ಲ. ನನಗೆ ನಿಮ್ಮ ವಿಚಾರ ಗೊತ್ತಿದೆ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಒಂದು ಪಕ್ಷ ಕೊಟ್ಟರೂ ನನ್ನ ರಾಜೀನಾಮೆ ಒಪ್ಪುವುದಿಲ್ಲ ಅವರು. ಬೇಕಾದರೆ ಕೇಳಿ.

ಶ್ರೀ ವಾಟಾಳ್ ನಾಗರಾಜ್:- ಈಗ ಕೊಟ್ಟು ನೋಡಿ. ಕೊಡಿ ನೀವು. ಅವರು ಒಪ್ಪುತ್ತಾರೋ ಇಲ್ಲವೋ ನೋಡಿಯೇ ಬಿಡೋಣ.

ಅಧ್ಯಕ್ಷರು:- ಆರೋಗ್ಯ ಮಂತ್ರಿಗಳ ಹತ್ತಿರ ಇವತ್ತೇ ಕೂಡಲೇ ಮಾತನಾಡಿ ನಾನು ಮಾಡಿಸುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್:- ನಮಗೆ ಅವಕಾಶ ಕೊಡುತ್ತೀರಿ. ತಮಗೆ ವಂದನೆಗಳು.

ಅಧ್ಯಕ್ಷರು:- ನಾನು ಮಾನ್ಯ ಆರೋಗ್ಯ ಮಂತ್ರಿಗಳನ್ನು ಇವತ್ತು ಸಂಜೆ ಒಳಗಾಗಿ ಕರೆಸುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಮಾನ್ಯ ಆರೋಗ್ಯ ಸಚಿವರು ಏನು ಹೇಳಿದರು ಎಂದರೆ ಸಾರ್ವಜನಿಕರ ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ ತತ್‌ಕ್ಷಣವೇ ವೈದ್ಯಾಧಿಕಾರಿಗಳನ್ನು ನಾವು ನೇಮಿಸದೇ ಹೋದಲ್ಲಿ ನಾನು ರಾಜೀನಾಮೆ ಕೊಡುತ್ತೇನೆ ಎಂದು ಹೇಳಿದ್ದರು. ಈ ವಿಚಾರದಲ್ಲಿ ತಮ್ಮ ಸಮ್ಮುಖದಲ್ಲಿ ಹೇಳುತ್ತಿದ್ದೇನೆ, ವೈದ್ಯಾಧಿಕಾರಿಗಳನ್ನು ನೇಮಿಸದೇ ಇರುವ ಕಾರಣ ಅವರು ಏತಕ್ಕೆ ರಾಜೀನಾಮೆ ಕೊಡಬಾರದು ಎಂದು ಕೇಳುತ್ತೇನೆ.

ಅಧ್ಯಕ್ಷರು:- ರಾಜೀನಾಮೆ ಅವರದು ಬೇಡ. ನಿಮ್ಮದು ಬೇಡ.

ಶ್ರೀ ಎಂ.ಪಿ. ಪ್ರಕಾಶ್:- ಮಾನ್ಯ ಅಧ್ಯಕ್ಷರೇ, ಲೋಕ ಸೇವಾ ಆಯೋಗದವರು ಈಗಾಗಲೇ ಶಿಫಾರಸ್ಸು ಮಾಡಿದ್ದಾರೆ.

ಉ. ಮಾಹಜನ್ ವರದಿಯನ್ನು ಕಾರ್ಯಗತ ಮಾಡುವುದು.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಅಧ್ಯಕ್ಷರೇ, ಬಹಳ ಸುದೀರ್ಘವಾಗಿ ಈ ಸಭೆಯಲ್ಲಿ ಚರ್ಚೆ ಆಗಿದೆ. ಸರ್ಕಾರ ಇದರ ಬಗ್ಗೆ ಗಮನ ಕೊಟ್ಟಿಲ್ಲ. ಮಹಾಜನ್ ವರದಿಯನ್ನು ಕಾರ್ಯಗತ ಮಾಡುವ ಬಗ್ಗೆ ಮಹಾರಾಷ್ಟ್ರದಲ್ಲಿ ಈಗ ಅವರು ನಿಯೋಗ ಹೋಗುತ್ತಿದ್ದಾರೆ. ಸರ್ವಪಕ್ಷಗಳ ನಿಯೋಗ ಕರೆದುಕೊಂಡು ಹೋಗಿದ್ದಾರೆ. ಪಾರ್ಲಿಮೆಂಟ್ ಮುಂದೆ ಸತ್ಯಾಗ್ರಹ ಮಾಡಿದ್ದಾರೆ. ನಮ್ಮ ಸರ್ಕಾರ ಈ ಬಗ್ಗೆ ಯಾವುದೇ ವಿಚಾರ ಎತ್ತಿಲ್ಲ. ಪ್ರಧಾನ ಮಂತ್ರಿಯವರು ನಮ್ಮವರೇ ಇದ್ದಾರೆ. ಈ ಸಂದರ್ಭದಲ್ಲಿ ನಮ್ಮ ಸರ್ಕಾರ ಸರ್ವಪಕ್ಷಗಳ ಒಂದು ನಿಯೋಗವನ್ನು ಕರೆದುಕೊಂಡು ಹೋಗುವುದು ಒಂದು. ಮತ್ತು ಬೆಳಗಾವಿ ನಗರಪಾಲಿಕೆ ಏನಿದೆ, ಮಹಾರಾಷ್ಟ್ರಕ್ಕೆ ಬೆಳಗಾವಿಯನ್ನು ಸೇರಿಸಬೇಕು ಎಂದು ತೀರ್ಮಾನ ಮಾಡಿ ಆ ಬಗ್ಗೆ ನಿರ್ಣಯ ಮಾಡಿದ್ದಾರೆ. ಹೋದ ಸಭೆಯಲ್ಲಿ ತಮಗೆ ಗೊತ್ತಿರಬಹುದು. ಹಿಂದಿನ ಮುಖ್ಯ ಮಂತ್ರಿಗಳಿಗೂ ನಮಗೂ ಅದರ ಬಗ್ಗೆಯೇ ಒಂದು ದೊಡ್ಡ ಚರ್ಚೆಯಾಗಿ ವಾದವಿವಾದವಾಯಿತು. ಆ ನಗರಪಾಲಿಕೆಯನ್ನು ಸಂಪೂರ್ಣವಾಗಿ ರದ್ದುಪಡಿಸಬೇಕು ಎಂದು ನಮ್ಮ ಆಗ್ರಹ. ಸರ್ಕಾರ ಮಹಾನಗರಪಾಲಿಕೆಯನ್ನು ರದ್ದುಪಡಿಸುತ್ತದೆಯೇ ಇಲ್ಲವೇ? ಮತ್ತು ಸರ್ವಪಕ್ಷಗಳ ನಿಯೋಗ ಕರೆದುಕೊಂಡು ಹೋಗುತ್ತಿರೋ ಇಲ್ಲವೇ ಎನ್ನುವ ಬಗ್ಗೆ ಸ್ಪಷ್ಟತೆ ಮತ್ತೊಂದು ಜಿಲ್ಲೆಗಳ ಪುನರ್‌ವಿಂಗಡಣೆ ಮಾಡುವ ಬಗ್ಗೆ ಸರ್ಕಾರದವರು ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದಾರೆ. ಆ ಬಗ್ಗೆ ತಾವೇನು ಹೇಳುತ್ತೀರಿ ಹೇಳಿ ಸಂತೋಷ. ನಿಮ್ಮ ಉತ್ತರದ ಬಗ್ಗೆ ನನಗೆ ಸಮಾಧಾನವಾದರೆ ಕುಳಿತುಕೊಳ್ಳುತ್ತೇನೆ, ಇಲ್ಲದಿದ್ದರೆ ಮುಂದಿನ ಕಾರ್ಯಕ್ರಮವೇನು ಎಂದು ಹೇಳುತ್ತೇನೆ.